ಪ್ರತ್ಯೇಕ ಫಲಾನುಭವಿಗಳು ಇರುವುದಿಲ್ಲ.

ಹೊಸ ವಸತಿ (ವಿದ್ಯಾರ್ಥಿನಿಲಯ) ನಿಲಯಗಳ ಪ್ರಾರಂಭ

808 (1022) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಲಾಗಿತ್ತು?

ಆ) ಈವರೆಗೆ ಎಷ್ಟು ವಿದ್ಯಾರ್ಥಿ (ಹೊಸ) ನಿಲಯಗಳನ್ನು ಸ್ಥಾಪಿಸಲಾಗಿದೆ?

ಇ) ಮೆಟ್ರಿಕ್- ನಂತರದ ವಿದ್ಯಾರ್ಥಿನಿಯರಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಕಳೆದ ವರ್ಷ ಸರ್ಕಾರ ನಿರ್ಧರಿಸಿತ್ತು; ಈವರೆಗೆ ಎಷ್ಟು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ?

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಯರಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಕಳೆದ ವರ್ಷ ಸ್ಥಾಪಿಸಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ ಒಟ್ಟು 45 ಹಾಗೂ ಪರಿಶಿಷ್ಟ ವರ್ಗದವರಿಗಾಗಿ 5 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಆ) ಈವರೆಗೆ ಹೊಸದಾಗಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 45 ಹಾಗೂ ಪರಿಶಿಷ್ಟ ವರ್ಗದವರಿಗಾಗಿ 5 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ.

ಇ) ಕಳೆದ ವರ್ಷ ಸರ್ಕಾರವು ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರಿಗಾಗಿ 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಗುರಿ ಹೊಂದಿದ್ದು, 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.

ಈ) ಕಳೆದ ವರ್ಷದಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದೆ. ಕಳೆದ ವರ್ಷ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರಿಗಾಗಿ 4 ಮೆಟ್ರಿಕ್-ಪೂರ್ವ ಮತ್ತು 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ

ಶಿಥಿಲಗೊಂಡ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಅವ್ಯವಹಾರ

809 (1025) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಡ್ಲಘಟ್ಟ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಪ್ರತಿನಿತ್ಯ ಎಷ್ಟು ರೇಷ್ಮೆ ಗೂಡಿನ ಹರಾಜು ಮಾಡಲಾಗುತ್ತಿದೆ; ವಿವರ ನೀಡುವುದು.

ಆ) ಈ ರೇಷ್ಮೆ ಗೂಡಿನಲ್ಲಿ ಮಾರುಕಟ್ಟೆ ಅಧಿಕಾರಿಗಳಿಂದ ರೇಷ್ಮೆ ಬೆಳೆಗಾರರಿಗೆ ಕಿರುಕುಳ ಕೊಡುತ್ತಿದ್ದು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣರಾದ ಅಧಿಕಾರಿಗಳು ಯಾರು; ವಿವರ ನೀಡುವುದು.

ಇ) ಈ ಸಂಬಂಧ ಒಬ್ಬ ರೇಷ್ಮೆ ಸಹಾಯಕ ನಿರ್ದೇಶಕರನ್ನು ಅಮಾನತ್ತುಗೊಳಿಸಿದ್ದು, ವಿಚಾರಣೆಗೆ ಮೊದಲೇ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತಿರುವುದು ನಿಜವೇ

ಈ) ಇವರ ಮೇಲೆ ಕಾನೂನಿನನ್ವಯ ಶಿಸ್ತುಕ್ರಮ ಕೈಗೊಳ್ಳುವ ಬದಲು ಅವರಿಗೆ ಪದೋನ್ನತಿ ನೀಡಲು ಪ್ರಯತ್ನಿಸುತ್ತಿರುವುದು ನಿಜವೇ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಪ್ರತಿನಿತ್ಯ 25 ರಿಂದ 40 ಟನ್ ರೇಷ್ಮೆ ಗೂಡಿನ ವಹಿವಾಟು ನಡೆಯುತ್ತಿದೆ. ಫೆಬ್ರವರಿ 2001ರ ಮಾಹೆಯಲ್ಲಿ ಪ್ರತಿದಿನ ವಹಿವಾಟಾದ ಗೂಡಿನ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಆಗಿರುವ ಅವ್ಯವಹಾರಗಳಿಗೆ ಮಾರುಕಟ್ಟೆ ಅಧಿಕಾರಿಗಳು ನೇರ ಹೊಣೆಗಾರರಲ್ಲ.

ಇ) ಶಿಡ್ಲಘಟ್ಟ ರೇಷ್ಮೆ ಗೂಡಿನ ಮಾರುಕಟ್ಟೆಗೆ ಸಂಬಂಧಿಸಿದಂತೆ ಮಾಡಿರುವ ಆರೋಪಗಳಿಗೆ ಮಾರುಕಟ್ಟೆ ಅಧಿಕಾರಿಗಳು ನೇರ ಹೊಣೆಗಾರರಲ್ಲವೆಂದು ಕಂಡುಬಂದ ಕಾರಣ ರೇಷ್ಮೆಸಹಾಯಕ ನಿರ್ದೇಶಕರ ಅಮಾನತ್ತನ್ನು ರದ್ದುಗೊಳಿಸಿ ಆದೇಶ ಹೊರಡಿಸಲಾಗಿದೆ.

ಈ) ಮೇಲೆ 'ಅ' ಮತ್ತು 'ಇ' ನಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ-1

ಫೆಬ್ರವರಿ 2001ರ ಮಾಹೆಯಲ್ಲಿ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಶಿಡ್ಲಘಟ್ಟದಲ್ಲಿ ವಹಿವಾಟಾದ ರೇಷ್ಮೆಗೂಡಿನ ಪ್ರಮಾಣ (ಟನ್‌ಗಳಲ್ಲಿ) (ದಿನಾಂಕ 26-01-2001 ರಿಂದ 25-02-2001ರ ವರೆಗೆ)

ಕ್ರಮ ಸಂಖ್ಯೆ	ದಿನಾಂಕ	ವಹಿವಾಟಾದ ಗೂಡಿನ ಪ್ರಮಾಣ (ಮೆ. ಟನ್)
1	2	3
01.	26-01-2001	ರಜಾದಿನ
2.	27-01-2001	44.000

1	2	3
3.	28-01-2001	42.000
4.	29-01-2001	38.000
5.	30-01-2001	30.000
6.	31-01-2001	27.000
7.	01-02-2001	27.000
8.	02-02-2001	31.500
9.	03-02-2001	23.000
10.	04-02-2001	28.500
11.	05-02-2001	27.500
12.	06-02-2001	35.000
13.	07-02-2001	29.000
14.	08-02-2001	25.500
15.	09-02-2001	28.000
16.	10-02-2001	25.500
17.	11-02-2001	27.000
18.	12-02-2001	29.500
19.	13-02-2001	29.500
20.	14-02-2001	29.000
21.	15-02-2001	32.000
22.	16-02-2001	32.000
23.	17-02-2001	37.500
24.	18-02-2001	37.500
25.	19-02-2001	40.500

1	2	3
26.	20-02-2001	43.000
27.	21-02-2001	37.000
28.	22-02-2001	41.000
29.	23-02-2001	41.000
30.	24-02-2001	50.000
31.	25-02-2001	38.000

ಫೆಬ್ರವರಿ 2001 ಮಾಹೆಯಲ್ಲಿ 1008.482 ಟನ್
ಫೆಬ್ರವರಿ 2001 ಮಾಹೆ ಅಂತ್ಯಕ್ಕೆ 9475.969 ಟನ್

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

810 (1029) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಈವರೆಗೆ ಎಷ್ಟು ಕೈಗಾರಿಕೆಗಳಿಗೆ ಸಹಾಯಧನ ನೀಡಲಾಗಿದೆ; ಜಿಲ್ಲಾವಾರು ವಿವರ ನೀಡುವುದು?

ಆ) ಈ ಸಹಾಯಧನವನ್ನು ನೀಡುವುದನ್ನು ಎಂದಿನಿಂದ ನಿಲ್ಲಿಸಲಾಗಿದೆ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕೆ ಸಚಿವರು) :

ಅ) 2000-2001ನೇ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಆದೇಶ ಹೊರಡಿಸಲಾಗಿದೆ ಪಟ್ಟಿ ಲಗತ್ತಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.